ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ನಿಯಮ 72ರ ಮೇರೆಗೆ ಮಹತ್ವದ ಜರೂರಾದ ವಿಷಯಗಳ ಬಗ್ಗೆ ದಿನಾಂಕ 18-12-2024 ರಂದು ಮಾನ್ಯ ಕೃಷಿ ಮಂತ್ರಿಗಳು ಹೇಳಿಕೆ ನೀಡಬೇಕೆಂಬುದಾಗಿ ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಮಾಹಿತಿ:

**ವಿಷಯ:** ಕಲಬುರಗಿ ಜಿಲ್ಲೆಯ 30 ಲಕ್ಷ ರೈತರು ಜಿಲ್ಲೆಯಲ್ಲಿ ಬೆಳೆಯುತ್ತಿರುವ ತೊಗರಿ GI- ಟ್ಯಾಗ್ ಕ್ಲಾಸ್-31 ಪ್ರಮಾಣಪತ್ರ 2017 ರಿಂದ 2019 ರಲ್ಲಿ ದೊರೆತಿದು ಅದರ ಗುಣಧರ್ಮಕ್ಕೆ ಅನುಗುಣವಾಗಿ ವೈಜ್ಞಾನಿಕ ಬೆಂಬಲ ಬೆಲೆ ಇನ್ನೂ ಘೋಷಿಸದೆ ಇರುವುದರಿಂದ ಕಲಬುರಗಿ ಜಿಲ್ಲೆಯ ರೈತರಿಗೆ ನಷ್ಟವುಂಟಾಗುತ್ತಿರುವುದರ ಬಗ್ಗೆ.

**ಉತ್ತರ:** ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ಘೋಷಣೆ ಮಾಡುತ್ತದೆ. ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು (Commission on Agriculture Costs and Prices-CACP) ಪ್ರತಿ ವರ್ಷ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆಗಳಿಗೆ ವಿವಿಧ ರಾಜ್ಯಗಳಲ್ಲಿ ಉತ್ಪಾದನಾ ವೆಚ್ಚ ವಿವರಗಳನ್ನು ಕೃಷಿ ವಿಶ್ವ ವಿದ್ಯಾನಿಲಯಗಳ ಸಹಯೋಗದಲ್ಲಿ ಲೆಕ್ಕಾಚಾರ ಮಾಡುತ್ತದೆ. ಜೊತೆಗೆ ಎಲ್ಲಾ ರಾಜ್ಯ ಸರ್ಕಾರಗಳಿಂದ ಬೆಳೆಗಳ ಉತ್ಪಾದನಾ ವೆಚ್ಚದ ಮಾಹಿತಿ ಪಡೆದು, ತಜ್ಞರು, ಅಧಿಕಾರಿಗಳು ಮತ್ತು ರೈತರೊಂದಿಗೆ ಚರ್ಚಿಸಿ, ಉತ್ಪಾದನಾ ವೆಚ್ಚ ವಿವರಗಳನ್ನು ಒಳಗೊಂಡ ಬೆಲೆ ನೀತಿ ವರದಿಯನ್ನು ತಯಾರಿಸಲಾಗುತ್ತದೆ. ವರದಿಯ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ರಾಜ್ಯಗಳ ಅಭಿಪ್ರಾಯ ಪಡೆದು, ನಂತರ ಉತ್ಪಾದನಾ ವೆಚ್ಚದ ಮೇಲೆ ಶೇ. 50 ರಷ್ಟು ಸೇರಿಸಿ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. CACP ಶಿಫಾರಸ್ಸಿನನ್ವಯ ಕೇಂದ್ರ ಸರ್ಕಾರವು ಬೆಂಬಲ ಬೆಲೆಯನ್ನು ಘೋಷಿಸುತ್ತದೆ.

ತೊಗರಿಗೆ ಹೆಚ್ಚಿನ ಬೆಂಬಲ ಬೆಲೆ ನಿಗದಿಪಡಿಸಲು ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷ ಶಿಫಾರಸ್ಸು ಮಾಡಲಾಗುತ್ತಿದೆ. ಕಳೆದ ಸಾಲುಗಳಲ್ಲಿ ರಾಜ್ಯದ ಶಿಫಾರಸ್ಸು ಮತ್ತು ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಬೆಂಬಲ ಬೆಲೆ ವಿವರ ಕೆಳಕಂಡಂತಿದೆ:

| ವರ್ಷ | ರಾಜ್ಯದ ಶಿಫಾರಸ್ಸು (ಪ್ರತಿ ಕ್ವಿಂಟಲ್ ಗೆ ರೂ.ಗಳಲ್ಲಿ) | ಕೇಂದ್ರ ನಿಗದಿಪಡಿಸಿದ ಬೆಂಬಲ ಬೆಲೆ (ಪ್ರತಿ ಕ್ವಿಂಟಲ್ ಗೆ ರೂ.ಗಳಲ್ಲಿ) |
|---|---|---|
| 2021-22 | 7200 | 6300 |
| 2022-23 | 8345 | 6600 |
| 2023-24 | 10916 | 7000 |
| 2024-25 | 11210 | 7550 |

ಕಲಬುರಗಿ ಜಿಲ್ಲೆಯಲ್ಲಿ ಬೆಳೆಯುವ ತೊಗರಿಗೆ ಜಿ.ಐ. ಟ್ಯಾಗ್ (ಕ್ಲಾಸ್-31) ಪ್ರಮಾಣ ಪತ್ರ ದೊರೆತಿದ್ದು, ಇದಕ್ಕೆ ಶೇ. 20-25 ರಷ್ಟು ಹೆಚ್ಚಿನ ಬೆಂಬಲ ಬೆಲೆ ನಿಗದಿಪಡಿಸಲು ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗವನ್ನು (Commission for Agriculture Crops and Prices- CACP) ಕೋರಲಾಗಿದೆ.

(ಎನ್.ಚಲುವರಾಯಸ್ವಾಮಿ)

ಕೃಷಿ ಸಚಿವರು

.CHALUVARAYASWAMY
Minister for Agriculture and
Minister Incharge of
Mandya District

Room No : 141,142,
1st Floor, Vikasa Soudha,
Bengaluru - 560 001
Tel : 080-22371240
080-22034010
E-mail: crsminister@gmail.com

o.MA/ /2024 Date: 05-12-2024

Dear Sir,

This is with reference to fixing reasonable price (MSP) for GI Tag Tur, produced in Kalaburagi District of Karnataka Karnataka Pradesh Redgram Growers Association (Regd.), Kalaburagi, Karnataka, have requested for fixing scientific and reasonable price for GI- Tag Tur (GI No. 593, Certificate No. 353 enclosed), produced in Kalaburagi District, Karnataka, while declaring MSP.

The GI tag Tur dal produced in Kalaburagi District has got high nutritional value with higher proportion of proteins and dietary fibre compared to tur produced in other parts of the State. KalaburagiTur dal is famous for its unique taste, aroma and shelf life which is due to the richness of Calcium and Potassium in the soils and also it cooks faster and has better cooked shelf life. A report on quality of Tur dal produced in Kalaburagi district submitted by the University of Agricultural Sciences, Raichur, Karnataka and Pulses Development Board, Karnataka was considered while declaring GI tag for Kalaburagitur dal.

With all these added advantages of GI tag tur produced in Kalaburagi region, farmers are not getting higher price for GI tag Tur compared to the normal tur produced in other parts of the State. Kalaburagi and Yadagiri districts of Karnataka are renowned as the 'Pulse Bowl' of Karnataka and these farmers need to be encouraged with higher price for GI tag tur, so that area under tur cultivation can be enhanced in this area, which will in turn help to achieve self-sufficiency in Pulse production.

In this connection, farmers are requesting for fixing 20-25% higher MSP for GI tag product, as it is considered in case of 'Grade-A' Paddy and 'maldandi' Jowar where higher MSP is fixed based on the quality.

In view of the quality aspects of GI tag tur dal and to support the farmers producing GI tag tur dal, it is hereby requested to consider the proposal of fixing higher MSP for GI tag tur, and thereby help the GI tag tur producing farmers of the State.

With regards,

Yours sincerely,

(N.Chaluvarayaswamy)

Dr. Vijay Paul Sharma,
Chairman,
Commission for Agriculture Costs and Prices (CACP),
Ministry of Agriculture & Farmer Welfare,
Governemnt of India, New Delhi.